ಮೈಸೂರು	ಚಾಮರಾಜನಗರ	32.420	39
	ಹುಣಸೂರು	267.452	318
	ಕೊಳ್ಳೇಗಾಲ	52.520	50
	ಮೈಸೂರು	51.150	75
ರಾಯಚೂರು	ರಾಯಚೂರು	157.530	150
ಶಿವಮೊಗ್ಗ	ಭದ್ರಾವತಿ (ಭಾಗ)	305.110	484
	ಸಾಗರ	1401.620	2216
	ಶಿವಮೊಗ್ಗ	1246.580	1121
ತುಮಕೂರು	ತುಮಕೂರು	240.02	402
ಉತ್ತರಕನ್ನಡ	ಹಳಿಯಾಳ	307.880	477
	ಹೊನ್ನಾವರ	400.630	657
	ಕಾರವಾರ	237.914	474
	ಸಿರ್ಸಿ	1235.00	2178
	ಯಲ್ಲಾಪುರ	643.428	852
	ಒಟ್ಟು	14848.83	19348

ವಿಷಯ:- ರಾಜ್ಯದಲ್ಲಿ ತೆರೆದಿರುವ ಖಾಸಗೀ ಆಯುರ್ವೇದ ಹಾಗೂ ಹೋಮಿಯೋಪತಿ ಕಾಲೇಜುಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 119 (486)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1991ರಿಂದ 1995ರ ಒಳಗೆ ಎಷ್ಟು ಖಾಸಗೀ ಸಂಸ್ಥೆಗಳಿಗೆ ಆಯುರ್ವೇದ ಹಾಗೂ ಹೋಮಿಯೋಪತಿ ಕಾಲೇಜುಗಳನ್ನು ತೆರೆಯಲು ಸರ್ಕಾರದವರು ಮಂಜೂರಾತಿ ಮಾಡಿದ್ದಾರೆ. (ವಿವರ ನೀಡುವುದು)

ಆ) ನಿಯಮಾವಳಿಗಳ ಪ್ರಕಾರ ಹೊಸದಾಗಿ ಆಯುರ್ವೇದ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಹಾಗಿದ್ದಲ್ಲಿ ಈಗಾಗಲೇ ಅಸ್ಥಿತ್ವದಲ್ಲಿ ಇರುವ ಕಾಲೇಜುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ|| ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):-

ಆ) 1991ರಿಂದ 1995ರ ಒಳಗೆ ಆಯುರ್ವೇದ ಕಾಲೇಜು 13 ಮತ್ತು ಹೋಮಿಯೋಪತಿ ಕಾಲೇಜು 4 ಸರ್ಕಾರದಿಂದ ಮಂಜೂರು ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನಮೂದಿಸಿದೆ.

ಇ) ಹೌದು.

ಈ) ಆಯಾ ಜಿಲ್ಲೆಯಲ್ಲಿ ಈಗಾಗಲೇ ಹೆಚ್ಚು ಕಾಲೇಜುಗಳಿದ್ದರೆ ಅಲ್ಲಿ ಹೊಸ ಕಾಲೇಜನ್ನು ಪ್ರಾರಂಭಿಸಲು ಸರ್ಕಾರವು ಪ್ರೋತ್ಸಾಹಿಸುವುದಿಲ್ಲ. ಆದ್ದರಿಂದ ಈಗ ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ಭಕ್ಕೆಯಾಗುವುದಿಲ್ಲ.

ಅನುಬಂಧ

1991ರಿಂದ 1995ರವರೆಗೆ ಹೊಸದಾಗಿ ಪ್ರಾರಂಭಿಸಿದ ಆಯುರ್ವೇದ ಮತ್ತು ಹೋಮಿಯೋಪತಿ ಕಾಲೇಜುಗಳ ವಿವರ.

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಮಂಜೂರಾತಿ ನೀಡಿದ ವರ್ಷ
	ಆಯುರ್ವೇದ	
1.	ಚಿದಂಬರ ಶಿಕ್ಷಣ ಸಂಸ್ಥೆ, ಆಯುರ್ವೇದ ಮೆಡಿಕಲ್ ಕಾಲೇಜು, ಸಿದ್ಧಾರೂಢ ಕಾಲೋನಿ, ಬೀದರ್.	1991-92
2.	ಬಿಎಂಎಇಎನ್ ಆಯುರ್ವೇದ ಮೆಡಿಕಲ್ ಕಾಲೇಜು, ಹೊಸಪೇಟೆ, ಬಳ್ಳಾರಿ ಜಿಲ್ಲೆ.	1991-92
3.	ಶ್ರೀ ಎಸ್‌ಬಿಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜು, ಮುಂಡರಗಿ, ಧಾರವಾಡ ಜಿಲ್ಲೆ.	1992-93
4.	ಶ್ರೀ ವಿಜಯಮಹಾಂತೇಶ್ ಆಯುರ್ವೇದ ಮೆಡಿಕಲ್ ಕಾಲೇಜು, ಇಳಕಲ್, ವಿಜಾಪುರ ಜಿಲ್ಲೆ	1992-93
5.	ಆಯುರ್ವೇದ ಮೆಡಿಕಲ್ ಕಾಲೇಜು, ಆಂಜನೇಯ ಲೇಔಟ್, ದಾವಣಗೆರೆ.	1992-93
6.	ಶ್ರೀ ಡಿ.ಎಂ.ಆಯುರ್ವೇದ ಮೆಡಿಕಲ್ ಕಾಲೇಜು, ಬಿಎಂ ರೋಡ್, ಹಾಸನ.	1992-93
7.	ಎಸ್.ಎಸ್.ಆಯುರ್ವೇದ ಮೆಡಿಕಲ್ ಕಾಲೇಜು, ಹಾವೇರಿ, ಧಾರವಾಡ ಜಿಲ್ಲೆ.	1992-93

8.	ಭಗವಾನ್ ಆಯುರ್ವೇದ ಮೆಡಿಕಲ್ ಕಾಲೇಜು, ಗಜೇಂದ್ರಗಡ, ರೋಣ ತಾ: ಧಾರವಾಡ ಜಿಲ್ಲೆ	1992-93
9.	ಡಾ:ಪಿ.ಎಸ್.ಎಂ.ರೂರಲ್ ಆಯುರ್ವೇದ ಮೆಡಿಕಲ್ ಕಾಲೇಜು, ಬಿಜಾಪುರ.	1992-93
10.	ಶ್ರೀ ಕಾಳಿದಾಸ ಆಯುರ್ವೇದ ಕಾಲೇಜು, ಬಾದಾಮಿ, ಬಿಜಾಪುರ ಜಿಲ್ಲೆ.	1992-93
11.	ಶ್ರೀ ಗುರುಶಿಕ್ಷಣ ಸಂಸ್ಥೆ, ಆಯುರ್ವೇದ ಮೆಡಿಕಲ್ ಕಾಲೇಜು, ಧಾರವಾಡ.	1992-93
12.	ಬಿಎಂಎಇಎನ್ ಆಯುರ್ವೇದ ಮೆಡಿಕಲ್ ಕಾಲೇಜು, ಕವಲಗುಂದಿ, ಭದ್ರಾವತಿ, ತಾ: ಶಿವಮೊಗ್ಗ.	1993-94
13.	ರಾಜೀವ್‌ಗಾಂಧಿ ಎಜುಕೇಷನ್ ಸೊಸೈಟಿ, ಆಯುರ್ವೇದ ಮೆಡಿಕಲ್ ಕಾಲೇಜು, ರೋಣ, ಧಾರವಾಡ ಜಿಲ್ಲೆ.	1993-94

ಹೋಮಿಯೋಪತಿ

1.	ಎಲ್‌ಇಎ ಹೋಮಿಯೋಪತಿ ಮೆಡಿಕಲ್ ಕಾಲೇಜು, ಧಾರವಾಡ.	1992-93
2.	ಅಲ್‌ಅಮೀನ್ ಹೋಮಿಯೋಪತಿ ಮೆಡಿಕಲ್ ಕಾಲೇಜು, ವಿಜಾಪುರ.	1992-93
3.	ಎನ್‌ಟಿಸಿಇ ಸೊಸೈಟಿ ನ್ಯಾಷನಲ್ ಹೋಮಿಯೋಪತಿ ಮೆಡಿಕಲ್ ಕಾಲೇಜು, ಧಾರವಾಡ.	1992-93
4.	ಎಸ್‌ಸಿ ಶಿರಕೋಳ ಹೋಮಿಯೋಪತಿ ಮೆಡಿಕಲ್ ಕಾಲೇಜು, ಸಂಕೇಶ್ವರ, ಬೆಳಗಾಂ ಜಿಲ್ಲೆ.	1993-94

ವಿಷಯ:- ಬಿಜಾಪುರ, ತಾಲ್ಲೂಕು, ಬಾದಾಮಿ ತಾಲ್ಲೂಕಿನಲ್ಲಿ ಖಾಲಿ ಇರತಕ್ಕ ವೈದ್ಯಾಧಿಕಾರಿಗಳ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 121 (484)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಪ್ರಾಥಮಿಕ